**ಸಾಕ್ಷಿಯನ್ನು ದಿಃ 28.03.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ.ಇ.ಎಂ. ವಕೀಲರಿಂದಃ-**

ನಾನು ಹಾಲಿ ಮೈಸೂರಿನಲ್ಲಿ ವಾಸ ಇದ್ದೇನೆ ಎಂದರೆ ಸರಿಯಲ್ಲ. ಹುಣಸೂರಿನ ಗೋಕುಲ ರಸ್ತೆಯಲ್ಲಿ ವಾಸ ಇದ್ದೇನೆ. 1 ನೇ ಪ್ರತಿವಾದಿ ಮೈಸೂರಿನ ಕನಕದಾಸ ನಗರದಲ್ಲಿ ವಾಸ ಇದ್ದಾರೆ. ನನ್ನ ಮತ್ತು 1 ನೇ ಪ್ರತಿವಾದಿಯ ಮಧ್ಯೆ ಮೈಸೂರಿನಲ್ಲಿ ವ್ಯವಹಾರ ಆಗಿದೆ ಎಂದರೆ ಸರಿ. ಅವರೇ ಮೈಸೂರಿಗೆ ಕರೆದುಕೊಂಡು ಹೋಗಿ ವ್ಯವಹಾರ ಮಾಡಿದ್ದಾರೆ. 1 ನೇ ಪ್ರತಿವಾದಿ ನನಾಗೆ ಆಧಾರ ಪತ್ರ ಬರೆದುಕೊಟ್ಟಿಲ್ಲ. ಡಿಪಿ ನೋಟ್ ಬರೆದುಕೊಟ್ಟಿದ್ದಾರೆ. ನನಗೆ ಬರೆದುಕೊಟ್ಟ ಪತ್ರದಲ್ಲಿ ಆಧಾರ ಪತ್ರ ಎಂದು ಬರೆದಿಲ್ಲ. ನಿಪಿ 1 ರಲ್ಲಿ ಆನ್ ಡಿಮಾಂಡ್ ಆಧಾರ ಪತ್ರ ಎಂದು ಬರೆಯಲಾಗಿದೆ ಎಂದರೆ ಆನ್ ಡಿಮಾಂಡ್ ನ್ನು ಆಧಾರ ಮಾಡಿದ್ದಾರೆ. ಸಾಮಾನ್ಯವಾಗಿ ಆಧಾರ ಪತ್ರ ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ನೋಂದಣಿ ಆಗಬೇಕು ಎಂದರೆ ಗೊತ್ತಿಲ್ಲ. ನಿಪಿ-1 ನ್ನು ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ನೋಂದಾಯಿಸಿಕೊಳ್ಳಲು ತೊಂದರೆ ಇರಲಿಲ್ಲ. ಅವರು ಕರೆದುಕೊಂಡು ಹೋಗಿ ದಾಖಲೆ ಮಾಡಿಸಿದ್ದಾರೆ. ಆಧಾರ ಪತ್ರವನ್ನು ನೋಂದಾಯಿಸಿಕೊಳ್ಳುವುದು ನನ್ನ ಕರ್ತವ್ಯ ಎಂದರೆ ಪ್ರತಿವಾದಿ ದಾಖಲೆಯನ್ನು ತಯಾರಿಸಿ ಕೊಟ್ಟಿದ್ದು ಏನೇನು ಮಾಡಿದ್ದಾರೆ ಎಂದು ಗೊತ್ತಿಲ್ಲ. ನಿಪಿ-1 ರಲ್ಲಿ ಏನೇನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸಹಿ ಹಾಕಲು ಹೇಳಿದ್ದರಿಂದ ಸಹಿ ಹಾಕಿದ್ದೇನೆ. ನಿಪಿ-1 ನ್ನು ಮೈಸೂರಿನ ವಕೀಲರಾದ ಮಂಗಳ

ಎನ್ನುವವರು ತಯಾರಿಸಿದ್ದಾರೆ. ಡಿಪಿ ನೋಟ್ ನ್ನು ಇಂತಹ ರೀತಿಯಲ್ಲಿಯೇ ಬರೆಯಬೇಕೆಂದು ನಿಯಮ ಇದೆ ಎಂದರೆ ಗೊತ್ತಿಲ್ಲ. ಸಾಮಾನ್ಯವಾಗಿ ಆಧಾರ ಪತ್ರವನ್ನು ರುಜುವಾತು ಪಡಿಸಬೇಕಾದರೆ Duty Penalty ಕಟ್ಟಬೇಕು ಎಂದರೆ ಗೊತ್ತಿಲ್ಲ. ಡಿಪಿ ನೋಟಿ ಖರೀದಿಸುವಾಗ First party, second party ಎಂಬ Description ಇರುತ್ತದೆ ಎಂದರೆ 1 ನೇ ಪ್ರತಿವಾದಿಯೇ ಅದನ್ನು ಖರೀದಿಸಿದ್ದಾರೆ.

ನಾನು ಹಣ ಕೊಡುವವನಾಗಿದ್ದರಿಂದ ದಾಖಲೆಯನ್ನು ಯಾವ ರೀತಿ ತಯಾರಿಸಬೇಕು ಎಂದು ನೋಡಿಕೊಳ್ಳುವುದು ನನ್ನ ಜವಾಬ್ದಾರಿ ಎಂದರೆ ಮೊದಲ ಬಾರಿಗೆ ದಾಖಲೆ ಮಾಡಿದ್ದರಿಂದ ಆ ಬಗ್ಗೆ ಗೊತ್ತಿಲ್ಲ. ಮುದ್ರಾಂಕ ಕಾಗದವನ್ನು ಖರೀದಿಸುವಾಗ ಯಾವ ಉದ್ದೇಶಕ್ಕಾಗಿ ಖರೀದಿಸಲಾಗುತ್ತಿದೆ ಎಂದು ಬರೆಯಬೇಕು ಎಂದರೆ ಅವರೇ ಮಾಡಿಕೊಟ್ಟಿರುವುದರಿಂದ ಆ ಬಗ್ಗೆ ಗೊತ್ತಿಲ್ಲ. ನಿಪಿ–1 ರಲ್ಲಿ ಲೋನ್ ಅಗ್ರಿಮೆಂಟ್ ಎಂದು ಬರೆಯಲಾಗಿದೆ ಎಂದರೆ ಸರಿ. ಸದರಿ ಜಾಗದಲ್ಲಿ ಆನ್ ಡಿಮಾಂಡ್ ಪ್ರೋನೋಟ್ ಎಂದೇ ಬರೆಯಬೇಕು ಎಂದರೆ ಅವರೇ ಮಾಡಿಕೊಟ್ಟಿದ್ದರಿಂದ ಗೊತ್ತಿಲ್ಲ. ನಿಪಿ–1 ರ Description ನಲ್ಲಿ ಆನ್ ಡಿಮಾಂಡ್ ಪ್ರೋನೋಟ್ ಎಂದು ಬರೆಯದೇ ಇರುವ ಕಾರಣ ನಿಪಿ–1 ರ ದಾಖಲೆ ಕಾನೂನಿನ ಅಡಿಯಲ್ಲಿ ಊರ್ಜಿತವಲ್ಲ ಎಂದರೆ ಗೊತ್ತಿಲ್ಲ. ಆನ್ ಡಿಮಾಂಡ್ ಪ್ರೋನೋಟ್ ನಲ್ಲಿ ಹಣದ ವ್ಯವಹಾರವನ್ನು ಹೊರತುಪಡಿಸಿ ಬೇರೆ ಏನೂ ಬರೆಯುವ ಹಾಗೇ ಇಲ್ಲ ಎಂದರೆ ಗೊತ್ತಿಲ್ಲ. ನಿಪಿ–1 ರಲ್ಲಿ ನಾನು ಜಮೀನಿನ ವಿವರಗಳನ್ನು ಷೆಡ್ಯೂಲ್ ರೂಪದಲ್ಲಿ ಕಾಣಿಸಿದ್ದೇನೆ ಎಂದರೆ ನಾನು ಹೇಳಿಲ್ಲ ಅವರೇ ಬರೆಸಿದ್ದಾರೆ. ಆನ್

ಡಿಮಾಂಡ್ ಪ್ರೋನೋಟ್ ನ್ನು ನಾನು ಬರೆಸಿಕೊಂಡಿರುವುದರಿಂದ ನಿಯಮಾನುಸಾರ ಬರೆಸಿಕೊಳ್ಳುವುದು ನನ್ನ ಕರ್ತವ್ಯ ಎಂದರೆ ನಾನು ಓದದೇ ಇರುವುದರಿಂದ ಆ ಬಗ್ಗೆ ಅಷ್ಟೊಂದು ಗೊತ್ತಿಲ್ಲ. ಈ ದಾವೆಯನ್ನು ಕೇವಲ ಆನ್ ಡಿಮಾಂಡ್ ಪ್ರೋನೋಟ್ ನ ಮೇಲೆ ಹಾಕಿದ್ದೇನೆ. ನಿಪಿ–2 ರ ದಾಖಲೆ ಚೆಕ್ ಎಂದರೆ ಸರಿ ಅವರೇ ಕೊಟ್ಟಿದ್ದಾರೆ. ನಿಪಿ–2 ಕ್ಕೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಚೆಕ್ ಅಮಾನ್ಯ ಪ್ರಕರಣ ದಾಖಲಿಸಬೇಕು ಎಂದರೆ ಸರಿ. ನಿಪಿ–2 ರಿಂದ 4 ರ ದಾಖಲೆಗಳು ಈ ದಾವೆಗೆ ಅನ್ವಯ ಆಗುವುದಿಲ್ಲ ಎಂದರೆ ಅವರೇ ಆ ದಾಖಲೆಗಳನ್ನು ಕೊಟ್ಟಿದ್ದಾರೆ.

ದಿನಾಂಕಃ 10.04.2021 ರಂದು 1 ನೇ ಪ್ರತಿವಾದಿ ನನ್ನ ಬಳಿ ಹಣ ಕೇಳಿದ್ದಾರೆ. ಆ ರೀತಿ ಹಣ ಕೇಳುವಾಗ 1 ನೇ ಪ್ರತಿವಾದಿ ತನ್ನ ಮಗನನ್ನು ಕರೆದುಕೊಂಡು ಬಂದಿದ್ದರು. ದಿನಾಂಕಃ 16.04.2021 ರಂದು ಹಣ ಕೊಟ್ಟಿದ್ದೇನೆ. ಆ ದಿನ ನಾನು ಹಣ ಕೊಟ್ಟಿಲ್ಲ , ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕಃ 07.03.2021 ರಂದು ನೋಟೀಸು ಕೊಟ್ಟಿದ್ದೇನೆ. ಆ ದಿನ ನಾನು ನೋಟೀಸು ಕೊಟ್ಟಿಲ್ಲ , ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಣ ಕೊಟ್ಟ ದಿನಾಂಕಕ್ಕೂ ನೋಟೀಸು ಕೊಟ್ಟ ದಿನಾಂಕಕ್ಕೂ ತಾಳೇ ಇಲ್ಲ ಎಂದರೆ ಗೊತ್ತಿಲ್ಲ. ಆನ್ ಡಿಮಾಂಡ್ ಪ್ರೋನೋಟ್ ಮೇಲೆ ನೋಟೀಸು ಕಳುಹಿಸಿಲ್ಲ. ಚೆಕ್ ಅಮಾನ್ಯಗೊಂಡಾಗ ನಾನು ಪ್ರತಿವಾದಿಗೆ ನೋಟೀಸ್ ಕೊಟ್ಟಿದ್ದೇನೆ ಎಂದರೆ ಸರಿ. ಚೆಕ್ ಅಮಾನ್ಯಕ್ಕೆ ಸಂಬಂಧಿಸಿದಂತೆ ನೋಟೀಸು ಕೊಟ್ಟ ನಂತರ ಖಾಸಗಿ ಪಿರ್ಯಾದನ್ನು ನಾನು ದಾಖಲಿಸಬೇಕಾಗಿತ್ತು ಎಂದರೆ ಗೊತ್ತಿಲ್ಲ. ಈ ದಾವೆಯನ್ನು ಸಲ್ಲಿಸಲು ವಕೀಲರಾದ ಶ್ರೀ ಭಾಸ್ಕರ್ ಮಾಹಿತಿ

ಕೊಟ್ಟಿದ್ದಾರೆ. ಸದರಿ ದಾಖಲೆಯನ್ನು ತಯಾರಿಸಲು ನೀವು ಮಾಹಿತಿ ಕೊಟ್ಟಿಲ್ಲವೇ ಎಂದರೆ ನನಗೆ ಗೊತ್ತಾಗುವುದಿಲ್ಲ. ಆನ್ ಡಿಮಾಂಡ್ ಪ್ರೋನೋಟ್ ಮೇಲೆ ನಾನು ನೋಟೀಸು ಕೊಡದೇ ಇರುವ ಕಾರಣ ಈ ದಾವೆಯಲ್ಲಿ ಯಾವುದೇ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಮಟಕೇರೆಯಲ್ಲಿ ವೆಂಕಟೇಶ್ವರ ಪೆಟ್ರೋಲ್ ಬಂಕ್ ಇದೆ ಎಂದರೆ ಇತ್ತು.

ನಾನು ಪ್ರತಿವಾದಿಯೊಂದಿಗೆ ವ್ಯವಹಾರ ಮಾಡಿದ್ದೇನೆ ಎನ್ನುವ ಸಮಯದಲ್ಲಿ ಕೋವಿಡ್ ಇತ್ತು ಎಂದರೆ ಗೊತ್ತಿಲ್ಲ. ಕೋವಿಡ್ ಇದ್ದ ಕಾರಣ ಪೆಟ್ರೋಲ್ ವ್ಯವಹಾರಕ್ಕೆ ಹಣಕಾಸಿನ ಮುಗ್ಗಟ್ಟು ಆಗಿದೆ ಎಂದು 1 ನೇ ಪ್ರತಿವಾದಿ ನನ್ನ ಬಳಿ ಹೇಳಿಕೊಂಡರು ಎಂದರೆ ಸರಿ. ಆ ರೀತಿ 1 ನೇ ಪ್ರತಿವಾದಿ ಬಂದು ಕೇಳಿದಾಗ ನಾನು ರೂ.25 ಲಕ್ಷ ಹಣ ಕೊಡುತ್ತೇನೆ ಎಂದು ಹೇಳಿದೆ ಎಂದರೆ ಸರಿಯಲ್ಲ. ಆ ರೀತಿ ಪೆಟ್ರೋಲ್ ಬಂಕ್ ಹತ್ತಿರ ಆದ ಮಾತುಕತೆಯಂತೆ ನಾನು ಪ್ರತಿವಾದಿಗೆ ಹಣ ಕೊಟ್ಟಿಲ್ಲ ಎಂದರೆ ಪೆಟ್ರೋಲ್ ಬಂಕ್ ಹತ್ತಿರ ಮಾತುಕತೆ ಆಗಿಲ್ಲ. ಸಾಕ್ಷಿ ಮುಂದುವರೆದು ಹಣಕೇಳಲು 1 ನೇ ಪ್ರತಿವಾದಿ ನಮ್ಮ ಮನೆಯ ಹತ್ತಿರ ಬಂದಿದ್ದರು. ಅಲ್ಲಿ ಮಾತುಕತೆಯಾಗಿದೆ ಎಂದು ನುಡಿಯುತ್ತಾರೆ. ನಾನು ಪ್ರತಿವಾದಿಯರಿಗೆ ರೂ.10 ಲಕ್ಷ ಕೊಟ್ಟಿದ್ದೇನೆ. ರೂ.50 ಸಾವಿರಕ್ಕೂ ಹೆಚ್ಚು ಹಣದ ವ್ಯವಹಾರವನ್ನು ಚೆಕ್ ಮೂಲಕ ಮಾಡಬೇಕು ಎಂದರೆ ಪ್ರತಿವಾದಿ ನಗದಾಗಿ ಹಣ ಬೇಕೆಂದು ಕೇಳಿದ್ದರು. ಸದರಿ ಹಣವನ್ನು ಡಿಡಿ ಮೂಲಕ ಅಥವಾ ಆರ್ ಟಿ ಜಿ ಎಸ್ ಮೂಲಕ ಕೊಡಲು ತೊಂದರೆ ಇತ್ತೇ ಎಂದರೆ ನಗದಾಗಿ ಹಣ ಬೇಕೆಂದು ಕೇಳಿದರು. ನಾನು ಪ್ರತಿವಾದಿಗೆ ಹಣ ಕೊಟ್ಟಿಲ್ಲ ಎಂದರೆ

ಸರಿಯಲ್ಲ. ಸಾಕ್ಷಿ ಮುಂದುವರೆದು ಹಣ ಪಡೆದುಕೊಂಡ ಬಗ್ಗೆ ಫೋಟೋ ಮತ್ತು ಸಿಡಿ ಇದೆ ಎಂದು ನುಡಿಯುತ್ತಾರೆ. ಫೋಟೋ ಮತ್ತು ಸಿಡಿ ಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ವಕೀಲರ ಬಳಿ ಕೊಟ್ಟಿದ್ದೇನೆ. ನಾನು ಫೋಟೋ ಮತ್ತು ಸಿಡಿಯನ್ನು ಹಾಜರುಮಾಡಿಲ್ಲ ಎಂದರೆ ವಕೀಲರ ಬಳಿ ಕೊಟ್ಟಿದ್ದೇನೆ. ಪತ್ರವನ್ನು ಮೈಸೂರಿನಲ್ಲಿ ಬರೆಯಲಾಗಿದೆ. ಪ್ರತಿವಾದಿ ಮೈಸೂರಿನಲ್ಲಿ ವಾಸ ಇದ್ದಾರೆ ಎಂದರೆ ಸರಿ. ಆದ್ದರಿಂದ ಹುಣಸೂರಿನ ನ್ಯಾಯಾಲಯದ ವ್ಯಾಪ್ತಿಗೆ ಈ ದಾವೆ ಬರುವುದಿಲ್ಲ ಎಂದರೆ ನಾನು ಹುಣಸೂರಿನವನಾಗಿದ್ದೇನೆ. ನಾನು ಮೈಸೂರಿನಲ್ಲಿ ವಾಸ ಇದ್ದರೂ ಕೂಡ ನಿಖರವಾಗಿ ವಿಳಾಸವನ್ನು ನೀಡದೇ ಇರುವ ಕಾರಣ ದಾವೆ ಮೈಸೂರು ನ್ಯಾಯಾಲಯದ ವ್ಯಾಪ್ತಿಗೆ ಬರುತ್ತದೆ ಎಂದರೆ ಸರಿಯಲ್ಲ. (ಮುಂದುವರೆದ ಪಾಟೀಸವಾಲು ಕಾಲಾವಕಾಶ ಕೋರಿದ್ದು ನೀಡಲಾಗಿದೆ).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,
ಸಹಿ/-
(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.